ಬೆಣ್ಣೆ, ತುಪ್ಪ ಮಾಡ್ಕೊತೀಯ. ಸಗಣಿ ಕೊಟ್ರೆ ಹೊಲಕ್ಕೆ ಹಾಕಿ ಬೆಳೆ ಬೆಳ್ಕೊತೀಯ. ಇಷ್ಟೆಲ್ಲ ಮಾಡ್ಕೊಂಡು ಈಗ ಕರುವಿಗೆ ಅಲೋ ಇಲ್ಲ ಅಂತೀಯಲ್ಲ, ದೇವ್ರು ನಿನ್ನ ಮೆಚ್ತಾನಾ?

ಕಂಡಕ್ಟರ್: ಅದೆಲ್ಲ ಗೊತ್ತಿಲ್ಲ. ಮೊದ್ಲು ಬಸ್ ಇಳಿಯೋ?

ರಂಗಸ್ವಾಮಿ: ಬಾರಪ್ಪ ಇಲ್ಲಿ ಬಾ, ಪಿಯುಸಿ ಓದಿರೋ ಶಿಷ್ಯ ಬಾ. ಪಿಯುಸಿ ಓದಿರೋನಿಗೆ ಇಷ್ಟೂ ಗೊತ್ತಿಲ್ವಾ? ಜಗದೀಶ್ ಚಂದ್ರ ಬೋಸ್ ಏನ್ ಹೇಳವ್ರೆ ಅಂತ ಗೊತ್ತಿಲ್ವಾ? ನಿಂಗೊತ್ತಿಲ್ದೆ ಇರಬಹುದು. ನಂಗೊತ್ತಿದೆ. ಎಂಟನೇ ಕ್ಲಾಸ್ ಓದಿದ್ದೀನಿ. ಗಿಡ, ಸಸ್ಯಕ್ಕೂ ಜೀವವಿದೆ ಅಂತ ಅವ್ರು ಹೇಳವ್ರೆ. ಗಿಡಕ್ಕೂ ಜೀವ ಇದೆ ಅನ್ನೋದಾದ್ರೆ ಇದು ಕರು. ಇದಕ್ಕಿರಲ್ವಾ? ಇದ್ ಬೇಡ್ವಾಯ್ತಾ? ಕಾಮಧೇನು ಕಣಯ್ಯಾ ಇದು. ಇದರೊಳಗೆ ಐದ್ ಸಾವಿರ ದೇವರವೆ ತಿಳ್ಕೋ. ನೆಟ್ಗಿರಕ್ಕಿಲ್ಲ. ಮದ್ವೆ ಗಿದ್ವೆ ಆಗಿದ್ಯೋ ಇಲ್ವೋ?

ಕಂಡಕ್ಟರ್: ಅದೆಲ್ಲ ಆಗಿದೆ. ಇನ್ನೊಂದ್ ಸರಿ ಮಾಡ್ಕೊಂಡ್ ನಿನ್ನೂ ಕರೆತೀನಿ ಬಾ.

ರಂಗಸ್ವಾಮಿ: ನನ್ನೇನೂ ಕರೆಯೋದ್ ಬೇಡ, ನೆಟ್ಗಿರೋದನ್ನು ಕಲಿತ್ಕೊ. ಇದನ್ನೆಲ್ಲ ಮನೇಲಿ ಹೇಳ್ಬೇಡ, ಮಕ್ ಉಗೀತಾರೆ. ಗೃಹಪ್ರವೇಶ ಆದಾಗ ಪೂಜೆ ಮಾಡಿ, ಮನೆಯೊಳಗೆ ಹಸು ಬಿಟ್ಕೊತಾರೆ. ಹಂಗೆ, ಗಾಡಿಯೊಳಕ್ಕೆ ಬಂದಿದೆ ಅಂದರೆ ನಿನ್ ಅದೃಷ್ಟ ಅಂತ ತಿಳ್ಕೊ.

ಅಷ್ಟರಲ್ಲಿ ಬಸ್ಸು ಮೊಸಳೆಗೆ ಬಂದಾಗಿತ್ತು. ಎಲ್ಲರೂ ಇಳಿಯತೊಡಗಿದರು. ಜಗಳದ ಗ್ಯಾಪ್‌ನಲ್ಲಿ ರಂಗಸ್ವಾಮಿ ಹತ್ರ ಟಿಕೆಟ್ ತಗೊಳ್ಳೋದನ್ನೇ ಕಂಡಕ್ಟರ್ ಮರೆತಿದ್ದ. ಅಷ್ಟೊತ್ತು ಗಟ್ಟಿಯಾಗಿ ಕರುವಿನ ಕಾಲುಗಳನ್ನು ಹಿಡಿದುಕೊಂಡಿದ್ದ ರಂಗಸ್ವಾಮಿಯೂ ಬಸ್ ಇಳಿಯುವ ಸಲುವಾಗಿ ಅದರ ಕಾಲುಗಳನ್ನು ಸಡಿಲಗೊಳಿಸಿದ. ಅದು ಬದುಕಿತು ಬಡ ಜೀವ ಅಂತ ಒಂದೇ ಏಟಿಗೆ ಜಂಪ್ ಮಾಡುವ ರಭಸದಲ್ಲಿ, ಸೀಟಿನ ಮೇಲೆಯೇ ಸಗಣಿ ಹಾಕಿತು. 'ಟಿಕೆಟ್ ಆದ್ರೂ ತಗೊಳ್ಳಯ್ಯ' ಎನ್ನುವ ಕಂಡಕ್ಟರ್ ಮಾತು ಕೇಳದೆ, 'ಏಯ್, ಯಾವ ಟಿಕೆಟ್ ಹೋಗಯ್ಯ' ಅಂತಂದು ಕೆಳಗಿಳಿದ ರಂಗಸ್ವಾಮಿ.

ಸೀಟಿನ ಮೇಲೆ ಕರು ಸಗಣಿ ಹಾಕಿದ್ದನ್ನು ಕಂಡು ಉರಿದುಹೋದ ಕಂಡಕ್ಟರ್, 'ಏಯ್, ಸಗಣೀನ ನಿಮ್ಮ ಅಪ್ಪ ಬಂದು ಸಾರಿಸ್ತಾನಾ, ಬಾ ಸಾರ್ಸಲೇ' ಅಂದ.

ಅಪ್ಪನ ವಿಚಾರ ಎತ್ತಿದ್ದಕ್ಕೆ ರಂಗಸ್ವಾಮಿ ಮತ್ತೆ ಕಂಡಕ್ಟರ್ ಮೇಲೆ ಮೈಕೊಡವಿ ಬಸ್ಸಿಗೇರಿದ. ಕಳ್ಳೆಕಾಯಿ ಸಿಪ್ಪೆ, ತಿಂಡಿಯ ಪ್ಲಾಸ್ಟಿಕ್ ಪೇಪರ್‌ಗಳು ಬಿದ್ದಿರೋದನ್ನು ಗಮನಿಸಿ, 'ಏಯ್ ಬಾರೋ ಇಲ್ಲಿ ಕಂಡಕ್ಟರ್' ಎಂದು ಕಸ ತೋರಿಸಿ, 'ಇದನ್ನೆಲ್ಲ ಟಿಕೆಟ್ ತಗೊಳ್ಳೋ ಜನರೇ ಕ್ಲೀನ್ ಮಾಡ್ತಾರೇನು? ನೀವೆ ಕ್ಲೀನ್ ಮಾಡ್ಕೊತೀರಿ ತಾನೆ. ಹಾಗೆಯೇ ಹಸು, ಕರೂನು ಸಾರ್ವಜನಿಕ. ಜನ ಮಾಡಿದ ಕಸವನ್ನ ನೀವೇ ಕ್ಲೀನ್ ಮಾಡೋದಾದ್ರೆ ಸಗಣೀನೂ ನೀನೇ ಕ್ಲೀನ್ ಮಾಡ್ಕೊಳ್ಳೋಲೆ' ಎಂದು ಬಸ್ಸಿಳಿದು ಮನೆಯತ್ತ ಹೆಜ್ಜೆ ಹಾಕಿದ.

ತನ್ನ ಜೀವನವನ್ನು ಸಾರ್ವಜನಿಕರಿಗಾಗಿಯೇ ಮೀಸಲಿಡುವ ಹಸು ಅದ್ಹೇಗೆ ಸಾರ್ವಜನಿಕ ಆಗಲ್ಲ ಅನ್ನೋದು ರಂಗಸ್ವಾಮಿಯ ಮೂಲ ಪ್ರಶ್ನೆಯಾಗಿತ್ತು. ರಂಗಸ್ವಾಮಿಯದ್ದು ವಿತಂಡವಾದವಾದರೂ ಕಂಡಕ್ಟರ್‌ನ ಬಳಿ ಅವರ ಪ್ರಶ್ನೆಗಳಿಗೆ ಉತ್ತರಗಳಿರಲಿಲ್ಲ.

ಮರುದಿನ ಎದುರಾದ ಅವರು, 'ಲೋ ಮರಿ, ಸಿಟಿಯಲ್ಲಿ ಓದ್ತಿದ್ದೀಯಾ ನೀನೇ ಹೇಳಪ್ಪ. ನಾನ್ ಮಾಡಿದ್ದು ಹೇಗ್ ತಪ್ಪು. ಹಾಲು ಕುಡಿತೀವಿ, ಅದ್ರಿಂದ ಕಾಫಿ ಮಾಡ್ಕೊತೀವಿ, ಟೀ ಮಾಡ್ಕೊತೀವಿ, ಗಿಣ್ ಮಾಡ್ತೀವಿ, ಬೆಣ್ಣೆ, ಮೊಸರು, ಮಜ್ಜಿಗೆ ತುಪ್ಪಾನೂ ಮಾಡ್ಕೊತೀವಿ. ಹೀಗಿರುವಾಗ ಅದು ಹೇಗೆ ಸಾರ್ವಜನಿಕ ಆಗೋದಿಲ್ವಾ ಹೇಳಪ್ಪ' ಅಂತ ನನ್ನ ಹಿಡ್ಕೊಂಡರು.

ಈ ಪ್ರಸಂಗವು ನನಗೆ ಆಗಾಗ ನೆನಪಾಗುತ್ತಲೇ ಇರುತ್ತದೆ. ಇದೊಂಥರ ಆರ್ಗ್ಯಾನಿಕ್ ಕಾಮಿಡಿ. ಹಳ್ಳಿಗರ ಲಾಜಿಕ್ ಪಾಯಿಂಟ್‌ಗಳು ಈಗಿನ ಮಕ್ಕಳಲ್ಲಿ ಕಾಣೋದೇ ಇಲ್ಲ. ಜನಕ್ಕೂ ಬರೋದಿಲ್ಲ.



## ಅಪರಾಧಿ ನಾನಲ್ಲ...

ಊರಿಂದ ಗೆಳೆಯ ಬಂದಿದ್ದ. ರಾತ್ರಿ ಅವನನ್ನು ಬಸ್ಸಿಗೆ ಹತ್ತಿಸುವುದಿತ್ತು. ನನ್ನ ಬಿಳಿ ಸ್ಕೂಟಿ ತೆಗೆದುಕೊಂಡು ಬಸ್‌ಸ್ಟ್ಯಾಂಡಿಗೆ ಹೋದೆ. ಅವನನ್ನು ಕಳಿಸಿ ವಾಪಸ್ ಬಂದು, ನಿಂತಿದ್ದ ನನ್ನ ಸ್ಕೂಟಿ ಓಡಿಸಿಕೊಂಡು ಮನೆಗೆ ಬಂದು ಮಲಗಿದೆ. ಮಾರನೇ ದಿನ ಬೆಳಗ್ಗೆ ಕಾಲೇಜಿಗೆ ಹೋಗಲು ನೋಡಿದರೆ, ಮನೆ ಮುಂದೆ ರಾತ್ರಿ ನಿಲ್ಲಿಸಿದ್ದ ನನ್ನ ಸ್ಕೂಟಿ ಮಾಯವಾಗಿತ್ತು. ಅಯ್ಯಯ್ಯೋ, ಯಾರೋ ರಾತ್ರೋರಾತ್ರಿ ಕಳ್ಳತನ ಮಾಡಿಬಿಟ್ಟಿದ್ದಾರೆ ಎಂದು ಗಾಬರಿಗೆ ಬಿದ್ದೆ. ನೋಡಿದರೆ ಅದೇ ಜಾಗದಲ್ಲಿ ಬಿಳಿ ಬಣ್ಣದ ಮತ್ತೊಂದು ಸ್ಕೂಟಿ ನಿಂತಿತ್ತು. ಆದರೆ ಅದು ನನ್ನದಾಗಿರಲಿಲ್ಲ.

ಯಾರೋ ರಾತ್ರಿ ಹೊತ್ತು ನನ್ನ ಹೊಸ ಸ್ಕೂಟಿ ಎಗರಿಸಿ ಅವರ ಹಳೇ ಗಾಡಿ ಬಿಟ್ಟು ಹೋಗಿದ್ದಾರೆಂದು ಕೂಗಾಡಿಕೊಂಡೆ. ನನ್ನ ಚಾವಿ ಬಳಸಿ ಸ್ಟಾರ್ಟ್ ಮಾಡಿದರೆ ಆ ಗಾಡಿ ಚಾಲು ಆಯಿತು. ಪೊಲೀಸ್ ಸ್ಟೇಷನ್ನಿಗೆ ತೆಗೆದುಕೊಂಡು ಹೋಗಿ ಈ ಗಾಡಿ ಒಪ್ಪಿಸಿ ಬಿಟ್ಟು, ನನ್ನ ಗಾಡಿ ಕಳುವಾದ ಬಗ್ಗೆ ಕಂಪ್ಲೇಂಟ್ ಕೊಡೋಣ ಎಂದುಕೊಂಡೆ. ಸ್ಟೇಷನಿಗೆ ಹೋದಾಗ ಒಂದಿಷ್ಟು ಜನ ಅಲ್ಲಿ ಸೇರಿದ್ದರು. ಅವರು ನಿನ್ನೆ ರಾತ್ರಿ ಕದ್ದುಕೊಂಡು ಹೋದ ಬಿಳಿ ಸ್ಕೂಟಿಗಾಗಿ ಕಾಯುತ್ತಿದ್ದರು. ನಾ ಓಡಿಸಿಕೊಂಡು ಹೋದ ಸ್ಕೂಟಿ ಅವರದ್ದೇ ಆಗಿತ್ತು. ಕೊನೆಗೂ 'ಕಳ್ಳ ಸಿಕ್ಕ' ಎಂದು ನನ್ನ ಹಿಡಿದರು.

ನಾನು, 'ನನ್ನ ಸ್ಕೂಟಿ ಕಳುವಾಗಿದೆ. ನನ್ನ ಮನೆ ಅಂಗಳದಲ್ಲಿ ಇದನ್ನು ಬಿಟ್ಟು ಹೋಗಿದ್ದಾರೆ' ಎಂದು ಎಷ್ಟು ಹೇಳಿದರೂ ಅವರು ಕೇಳಲಿಲ್ಲ. ಕೊನೆಗೆ ಪೊಲೀಸರ ಪ್ರವೇಶವಾಯಿತು.

ಖಾಕಿಗಳು ನನ್ನನ್ನು ನೋಡಿದ್ದೇ ತಮ್ಮ ಎಂದಿನ ರೋಷ ವ್ಯಕ್ತಪಡಿಸಿದರು. 'ಏನ್ರೀ ಮಿಸ್ಟರ್, ಸ್ಕೂಟಿ ಕದ್ದುಕೊಂಡು ಹೋಗಿದ್ದೀರಲ್ಲ' ಎಂದು ಉಗಿದರು. ನನ್ನ ಸ್ಕೂಟಿ ಕೂಡ ಕಳುವಾಗಿದೆ ಎಂದು ಎಷ್ಟು ಹೇಳಿದರು ಅವರು ಕೇಳಲಿಲ್ಲ. ಮೊದಲು ನಿಮ್ಮ ಗಾಡಿ ನಂಬರ್ ಹೇಳಿ ಎಂದರು. ಹೇಳಿದೆ. ನನ್ನ ವಾಹನವನ್ನು ಸ್ಟೇಷನ್ನಿನ ಒಂದು ಮೂಲೆಯಲ್ಲಿ ನಿಲ್ಲಿಸಿದ್ದರು.

ಅಲ್ರಿ 'ನಿಮ್ಮ ಗಾಡಿ ಬಸ್‌ಸ್ಟ್ಯಾಂಡಿನಲ್ಲಿ ಬಿಟ್ಟು ಬೇರೆಯವರ ಗಾಡಿ ಎತ್ಕೊಂಡ್ ಹೋಗಿದ್ದೀರಲ್ಲ, ಜ್ಞಾನ ಇದಿಯೇನ್ರಿ ನಿಮಗೆ. ರಾತ್ರಿ ಇಡೀ ವಾರಸುದಾರರಿಲ್ಲದೆ ಅನಾಥವಾಗಿ ನಿಂತಿತ್ತು. ನಿಮ್ಮ ಗಾಡಿಯನ್ನು ನಾವು ಸ್ಟೇಷನಿಗೆ ತಂದು ಹಾಕಿದ್ದೇವೆ' ಎಂದು ರೋಪು ಜಡಿದರು.

ನಾನು ವಾಹನ ಕಳ್ಳ ಎಂದು ತದಕಲು ಬಂದಿದ್ದವರಲ್ಲಿ ಒಂದಿಬ್ಬರು ಸದ್ಯ ನನಗೆ ಪರಿಚಯ ಇದ್ದರು. ಹೀಗಾಗಿ ನಾನು ಅಂದು ಬಚಾವಾದೆ.

ಯಾವ ಕೀಲಿ ಕೈ ಹಾಕಿದರೂ ಸಲೀಸಾಗಿ ಚಾಲು ಆಗಬಲ್ಲ ಗಾಡಿ ಇಟ್ಟುಕೊಂಡಿದ್ದ ಎದುರಾಳಿ ವ್ಯಕ್ತಿಯದೇ ತಪ್ಪು ಎಂದು ನಾನು ವಾದಿಸಲು ರೆಡಿಯಾಗಿದ್ದೆ. ಆದರೆ, ಧೈರ್ಯ ಸಾಕಾಗಲಿಲ್ಲ. ನನ್ನ ಗಾಡಿ ಹೌದೋ ಅಲ್ಲವೋ? ಎಂದು ಪರಿಶೀಲಿಸದೆ ತೆಗೆದುಕೊಂಡು ಹೋಗಿದ್ದು ನನ್ನದೇ ಅಪರಾಧವಾಗಿತ್ತು. ಬೀಳುವ ಹೊಡೆತಗಳು ಅಂದು ತಪ್ಪಿದವಲ್ಲ ಎಂಬುದೇ ದೊಡ್ಡ ಸಮಾಧಾನ.

–ಕಲೀಮ್ ಉಲ್ಲಾ, ವನ್ಯಜೀವಿ ಛಾಯಾಗ್ರಾಹಕ